# ದೈವಾರಾಧನೆಯಲ್ಲಿ – ಐಕ್ಯತೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಕಲಿಯುವುದಕ್ಕೆ ಓದಬೇಕಾದ ಸತ್ಯವೇದ ವಚನಗಳು; ಪ್ರ.ಕ. 4:8,11; ಮತ್ತಾಯ 4:8,9; ದಾನಿ 3:8–18; ಪ್ರ.ಕ. 14:9; ಪ್ರ.ಕ. 14:6,7; ಅ.ಕೃ. 4:23–31.**

**ಸ್ಮರಣವಾಕ್ಯ : "ಮತ್ತೊಬ್ಬ ದೇವದೂತನು, ಆಕಾಶ ಮಧ್ಯದಲ್ಲಿ ಹಾರಿ ಹೋಗುವುದನ್ನು ಕಂಡನು. ಭೂನಿವಾಸಿಗಳಾಗಿರುವ ಸಕಲ ಜನಾಂಗ ಕುಲ ಪ್ರಜೆಗಳವರಿಗೂ ಸಕಲ ಭಾಷೆಗಳನ್ನಾಡುವವರಿಗೂ ಸಾರಿ ಹೇಳುವುದಕ್ಕೆ ನಿತ್ಯವಾದ ಶುಭವರ್ತಮಾನವು ಅವನಲ್ಲಿತ್ತು. ಅವನು ನೀವೆಲ್ಲರು ದೇವರಿಗೆ ಭಯಪಟ್ಟು ಆತನನ್ನು ಘನಪಡಿಸಿರಿ, ಆತನು ನ್ಯಾಯತೀರ್ಪು ಮಾಡುವ ಗಳಿಗೆಯು ಬಂದಿದೆ. ಭೂಲೋಕ ಪರಲೋಕವನ್ನೂ ಸಮುದ್ರವನ್ನೂ ನೀರಿನ ಬುಗ್ಗೆಗಳನ್ನೂ ಉಂಟು ಮಾಡಿದಾತನಿಗೆ ನಮಸ್ಕಾರ ಮಾಡಿರಿ ಎಂದು ಮಹಾಶಬ್ದದಿಂದ ಹೇಳಿದನು". (ಪ್ರಕ.** 14:6,7).

ಆದಿಕ್ರೈಸ್ತರು ಪಂಚಾಶತ್ತಮ ದಿನವಾದ ಕೂದಲೆ ತಮ್ಮ ಹೆಚ್ಚಿನ ಸಮಯವನ್ನು ದೈವೀಕ ಆರಾಧನೆಯಲ್ಲಿ ಕಳೆಯುತ್ತಿದ್ದರು. ಇವರು ಅಪೋಸ್ತಲರ ಬೋಧನೆಯನ್ನು ಕೇಳುವುದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವುದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು. ಅ.ಕೃ. 2:42.

ಯೇಸುವೇ ಮೆಸ್ಸಿಯರು–ಅಭಿಷಿಕ್ತನು ಎಂದು ತಿಳಿದುದರಲ್ಲಿ, ಹಳೆಯ

ಒಡಂಬಡಿಕೆಯ ಪ್ರವಾದನೆಗಳು ನೆರವೇರಿದುದರಲ್ಲಿ ಆನಂದಭರಿತರಾಗಿ ಹೃದಯಗಳಲ್ಲಿ ಕೃತಜ್ಞತೆ ತುಂಬಿದವರಾಗಿ ದೇವರಿಗೆ ವಂದನೆ ಸಲ್ಲಿಸುತ್ತಿದ್ದರು.

ಈ ಅದ್ಭುತವಾದ ಸತ್ಯವನ್ನು ತಿಳಿದುಕೊಳ್ಳುವುದು ಎಂಥಾ ಸೌಭಾಗ್ಯವಲ್ಲವೆ? ದೇವರು ತನ್ನನ್ನು ಪ್ರಕಟಿಸಿಕೊಂಡು ಯೇಸುಕ್ರಿಸ್ತನ ಜೀವನ, ಮರಣ, ಪುನರುತ್ಥಾನಗಳ ಮೂಲಕ ಆದಿಕ್ರೈಸ್ತರ ಜೀವಿತಗಳಲ್ಲಿ ಏನೆಲ್ಲವನ್ನು ನಡೆಸಿದನೋ ಅದಕ್ಕೆ ಅವರು ಅವನಿಗೆ ಕೃತಜ್ಞತೆ ಸಲ್ಲಿಸುವ ಸಲುವಾಗಿ ಎಲ್ಲರೂ ಒಟ್ಟಾಗಿ ಅನ್ಯೋನ್ಯತೆಯಿಂದ ವಾಕ್ಯಗಳಲ್ಲಿ, ಪ್ರಾರ್ಥನೆಗಳಲ್ಲಿ ಸಮಯವನ್ನು ಕಳೆಯುವ ಅಗತ್ಯತೆಯನ್ನು ಮನಗಂಡಿದ್ದಾರೆ.

ಯೇಸುಕ್ರಿಸ್ತನ ಸಭೆಯನ್ನು "ಆರಾಧಿಸುವ ಒಂದು ಸಮುದಾಯ"ವೆಂಬುದಾಗಿ ವ್ಯಾಖ್ಯಾನಿಸಬಹುದು. ದೇವರೇ ಇದನ್ನು ಆತ್ಮಸಂಬಂಧವಾದ ಮಂದಿರವಾಗಿ ಪವಿತ್ರ ಯಾಜಕವರ್ಗದವರಾದ ನಮಗೆ ಕ್ರಿಸ್ತನ ಮೂಲಕ ಆತ್ಮೀಯ ಯಜ್ಞಗಳನ್ನು ಅರ್ಪಿಸುವುದಕ್ಕೆ ಇದನ್ನು ಅಸ್ತಿತ್ವಕ್ಕೆ ತಂದನು (1 ಪೇತ್ರ 215).

ಕ್ರೈಸ್ತ ಸಮುದಾಯವು ದೇವರಿಗೆ ಕೃತಜ್ಞತೆ ಸಲ್ಲಿಸಲು ಮಾಡುವ ಆರಾಧನೆಯು ಮನುಷ್ಯರ ಮನಸ್ಸುಗಳನ್ನು, ಹೃದಯಗಳನ್ನು ದೇವರ ಸ್ವಭಾವದ ಹೋಲಿಕೆಗೆ ಸರಿಯಾಗಿ ಮಾರ್ಪಾಟು ಮಾಡಿ ಅವರನ್ನು ಆತನ ಸೇವೆಗೆ ಸಿದ್ಧಪಡಿಸುತ್ತದೆ.

ಈ ವಾರದ ಪಾಠವು ಆರಾಧನೆಯ ಅರ್ಥ ಮತ್ತು ಈ ಆರಾಧನೆಯು ಯೇಸುಕ್ರಿಸ್ತನಲ್ಲಿ ವಿಶ್ವಾಸಿಗಳ ಐಕ್ಯತೆಯನ್ನು ಹೇಗೆ ಸಂರಕ್ಷಿಸುತ್ತದೆ ಎಂಬುದರ ಬಗ್ಗೆ ಗಮನವನ್ನು ಹರಿಸುತ್ತದೆ. ಈ ಪಾಠವನ್ನು ಡಿಸೆಂಬರ್ 15ರ ಸಬ್ಬತ್ತಿಗೆ ಸಿದ್ಧಮಾಡಿಕೊಳ್ಳಲು ಅಧ್ಯಯನ ಮಾಡಿರಿ.

**ಭಾನುವಾರ** **ಡಿಸೆಂಬರ್ 9**

## ನಮ್ಮ ಸೃಷ್ಟಿಕರ್ತನನ್ನು ಮತ್ತು ವಿಮೋಚಕನನ್ನು ಆರಾಧಿಸುವುದು

ನಾವು ಆರಾಧನೆಯ ಬಗ್ಗೆ ವಿಚಾರ ಮಾಡುವಾಗ ಆರಾಧನೆಯೆಂಬುದೌ ಏನನ್ನು ಒಳಗೊಂಡಿದೆ. ಇದನ್ನು ಹೇಗೆ ಮಾಡುತ್ತೇವೆ ಮತ್ತು ಇದರ ಮುಖ್ಯ ಲಕ್ಷಣಗಳೇನು ಎಂಬುದನ್ನು ಪದೇಪದೆ ಎತ್ತಿ ತೋರುತ್ತೇವೆ. ಆದರೆ ಆರಾಧನೆಯ ಗಾಢವಾದ ಅರ್ಥವೇನು? ದೇವರನ್ನು ಆರಾಧಿಸುವುದೆಂಬುದರ ಅರ್ಥವೇನು? ಮತ್ತು ಆರಾಧನೆಯನ್ನು ಯಾಕೆ ಮಾಡಬೇಕು? ಇದಕ್ಕೆ ಅರಸನಾದ ದಾವೀದನು ಕೀರ್ತನೆ 29:2 ರಲ್ಲಿ "ಯೆಹೋವನ ನಾಮಕ್ಕೆ ಯೋಗ್ಯವಾದ ಘನವನ್ನು ಸಲ್ಲಿಸಿರಿ; ಪರಿಶುದ್ಧತ್ವವೆಂಬ ಭೂಷಣದೊಡನೆ ಅಡ್ಡಬೀಳಿರಿ" ಎಂಬುದಾಗಿ ಹೇಳುತ್ತಾನೆ. ಈ

ಕೀರ್ತನೆಯ ವಚನವು ಆರಾಧನೆಯ ಬಗ್ಗೆ ನಾವು ಅರಿವನ್ನು ಹೊಂದುವುದಕ್ಕೆ ಸರಿಯಾದ ದಿಕ್ಕಿಗೆ ನಮ್ಮನ್ನು ನಡಿಸುತ್ತದೆ.

ದೇವರನ್ನು ಆರಾಧಿಸುವುದು ಎಂದರೆ ಆತನಿಗೆ ಸಲ್ಲತಕ್ಕ ಘನಮಾನವನ್ನು ಸಲ್ಲಿಸುವುದೇ ಆಗಿದೆ.

**ಪ್ರಕಟನೆ 4ನೇ ಮತ್ತು 5ನೇ ಅಧ್ಯಾಯಗಳನ್ನು ಓದಿದರೆ ಪರಲೋಕ ನಿವಾಸಿಗಳು (ದೇವದೂತರು) ದೇವರನ್ನೂ, ಯಜ್ಞದ ಕುರಿಯಾದಾತನಾದ ಯೇಸುಕ್ರಿಸ್ತನನ್ನೂ ಯಾವ ಕಾರಣಗಳಿಗೆ ಆರಾಧಿಸುತ್ತಾರೆಂಬುದು ತಿಳಿಯುತ್ತದೆ. ನೋಡಿರಿ ಪ್ರಕಟನೆ 4:8,11/5:9, 10,12.**

---------------------------------------------------------------------------------

---------------------------------------------------------------------------------

---------------------------------------------------------------------------------

ದೇವರ ಸೃಷ್ಟಿ ಮತ್ತು ರಕ್ಷಣೆಯ ನಿಮಿತ್ತ ವ್ಯಕ್ತಿಯು ಆತನಿಗೆ ಕೃತಜ್ಞತೆಯಿಂದ ತೋರುವ ಪ್ರತಿಕ್ರಿಯೆಯೇ ಆರಾಧನೆಯಾಗಿದೆ. ಅಂತ್ಯಕಾಲದಲ್ಲಿ ವಿಮೋಚನೆ ಪಡಕೊಂಡವನೂ ಸಹ ಈ ಆರಾಧನೆಯಲ್ಲಿ ಸೇರುವವನಾಗಿ ಆತನ ರಕ್ಷಣೆಗೆ ಇದೇ ಪ್ರಕಾರವಾಗಿ ಪ್ರತಿಕ್ರಿಯೆ ತೋರುತ್ತಾನೆ.

"ದೇವರಾದ ಕರ್ತನೇ, ಸರ್ವಶಕ್ತನೇ ನಿನ್ನ ಕೃತ್ಯಗಳು ಮಹತ್ತಾದವುಗಳೂ ಆಶ್ಚರ್ಯಕರವಾದವುಗಳೂ ಆಗಿವೆ. ಸರ್ವ ಜನಾಂಗಗಳ ಅರಸನೇ ನಿನ್ನ ಮಾರ್ಗಗಳು ನ್ಯಾಯವೂ ಸತ್ಯವೂ ಆಗಿವೆ; ಕರ್ತನೇ ನಿನ್ನ ನಾಮಕ್ಕೆ ಭಯಪಡುವವರು ಅದನ್ನು ಘನವಾದದ್ದೆಂದು ಒಪ್ಪಿಕೊಳ್ಳುವರು ಯಾರಾದರೂ ಇದ್ದಾರೆಯೇ? ನೀನೊಬ್ಬನೆ ಪರಿಶುದ್ಧನು, ನಿನ್ನ ನೀತಿ ಕೃತ್ಯಗಳು ಪ್ರಕಾಶಕ್ಕೆ ಬಂದುದರಿಂದ ಎಲ್ಲಾ ಜನಾಂಗಗಳು ಬಂದು ನಿನ್ನ ಸನ್ನಿಧಾನದಲ್ಲಿ ನಮಸ್ಕಾರ ಮಾಡುವರು ಎಂದು ಹೇಳಿದರು" ಪ್ರಕಟನೆ 15:3,4.

ಹೇಗೆ ನಾವು ನಂಬಿಕೆಯಿಂದ ದೇವರಿಗೆ ಆತನು ನಡೆಸಿದ ಮಹತ್ಕಾರ್ಯಗಳಿಗಾಗಿ ತೋರಿಸುವ ಪ್ರಕ್ರಿಯೆಯು ಆರಾಧನೆ ಎನಿಸಿಕೊಳ್ಳುತ್ತದೆ. ನಮ್ಮ ರಕ್ಷಣೆಗಾಗಿ ದೇವರು ಮಹತ್ಕಾರ್ಯಗಳನ್ನು ಮಾಡಿದ್ದಾನೆಂದು ನಂಬುತ್ತೇವೆ, ನಾವು ದೇವರಿಗೆ ತೋರಿಸುವ ನಂಬಿಕೆಯ ಪ್ರತಿಕ್ರಿಯೆಯು ಆರಾಧನೆ ಎನಿಸಿಕೊಳ್ಳುತ್ತದೆ.

ಆತನು ನಮ್ಮನ್ನು ಸೃಷ್ಟಿಸಿದ್ದಾನೆಂಬ ಕಾರಣವು ಮೊದಲನೆಯದು, ನಮ್ಮನ್ನು ವಿಮೋಚಿಸಿದ್ದಾನೆಂಬುದು ಎರಡನೆಯದು. ಆರಾಧನೆಗೆ ದೇವರು ಮಾತ್ರ ಯೋಗ್ಯನು ಆದುದರಿಂದ ನಾವು ಆತನನ್ನು ಮೆಚ್ಚಿಕೆಯಿಂದಲೂ, ಭಕ್ತಿಯಿಂದಲೂ,

ಸ್ತುತಿಸ್ತೋತ್ರಗಳಿಂದಲೂ, ಪ್ರೀತಿಯಿಂದಲೂ, ವಿಧೇಯತೆಯಿಂದಲೂ ಆರಾಧಿಸುತ್ತೇವೆ.

ಹೌದು! ದೇವರು ತನ್ನನ್ನು ಸೃಷ್ಟಿಕರ್ತನಾಗಿ, ನಮ್ಮ ರಕ್ಷಕನಾಗಿ ತನ್ನ ವಾಕ್ಯದ ಮೂಲಕ ಪ್ರಕಟಪಡಿಸಿಕೊಂಡಿದ್ದಾನೆ. ಆದುದರಿಂದ ಆತನ ಬಗ್ಗೆ ನಮಗೆ ಅರಿವು ಇದೆ. ಇನ್ನೂ ಹೆಚ್ಚಾಗಿ ಹೇಳಬೇಕೆಂದರೆ ದೇವರು ಯೇಸುಕ್ರಿಸ್ತನ ಸೇವೆಯ ಮೂಲಕ ವ್ಯಕ್ತಿಯಾಗಿ ತನ್ನನ್ನು ಪ್ರಕಟಿಸಿಕೊಂಡದ್ದರಿಂದ ಕ್ರೈಸ್ತರು ಅವನ ಬಗ್ಗೆ ತಿಳಿದವರಾಗಿದ್ದಾರೆ. ಆದಕಾರಣ ಕ್ರೈಸ್ತರು ಯೇಸುಕ್ರಿಸ್ತನನ್ನು ರಕ್ಷಕನನ್ನಾಗಿಯೂ ವಿಮೋಚಕನನ್ನಾಗಿಯೂ ಆರಾಧಿಸುತ್ತಾರೆ.

ಆತನು ಯಜ್ಞದ ಕುರಿಯಾಗಿ ಮರಣ ಹೊಂದಿ ಮತ್ತೆ ಪುನರುತ್ಥಾನ ಹೊಂದಿರುವುದೇ ಕ್ರೈಸ್ತರು ಮಾಡುವ ಆರಾಧನೆಗೆ ತಿರುಳು ಭಾರದಂತೆ. ಕ್ರೈಸ್ತರು ಒಟ್ಟಾಗಿ ಆರಾಧನೆಗೆ ಕೂಡಿ ಬಂದಾಗ ಈ ಭಕ್ತಿಭಯದ ಭಾವದಿಂದಲೂ ಕೃತಜ್ಞತೆಯಿಂದಲೂ ನಮ್ಮ ಆರಾಧನೆಯು ಮುಂದುವರೆಯಬೇಕು.

**ಯೇಸು ನಮ್ಮ ಸೃಷ್ಟಿಕರ್ತನಾಗಿ, ರಕ್ಷಕನಾಗಿ ಯೇಸುಕ್ರಿಸ್ತನಲ್ಲಿ ನಮಗೇನು ಕೊಡಲ್ಪಟ್ಟಿದೆ ಎಂಬುದರ ಬಗ್ಗೆ ಯಾವುದರಿಂದ ಆತನು ನಮ್ಮನ್ನು ಉಳಿಸಿದ್ದಾನೆ ಎಂಬುದರ ಬಗ್ಗೆ ಆತನು ನಮಗೇನು ಕೊಡುತ್ತಾನೆಂಬುದರ ಬಗ್ಗೆ ಆಲೋಚಿಸಿರಿ– ಆತನು ನಮಗಾಗಿ ನಮ್ಮ ಬದಲಿಗೆ ತನ್ನನ್ನು ಮರಣಕ್ಕೆ ಸಮ್ಮತಿಸಿದ್ದರಿಂದ ಇವೆಲ್ಲಾ ದೊರೆತವು. ಈ ನಮ್ಮ ಎಲ್ಲಾ ಆರಾಧನೆಗೆ ಈ ಸತ್ಯಸಂಗತಿಗಳೇ ಅಡಿಪಾಯವಾಗಿರಬೇಕು ಏಕೆ?**

**ಸೋಮವಾರ** **ಡಿಸೆಂಬರ್** 10

**ಮಿಥ್ಯಾರಾಧನೆ (ಸುಳ್ಳು ಆರಾಧನೆ)**

**ಮತ್ತಾಯ 4:8,9ನ್ನು ಓದಿರಿ. ಅಡವಿಯಲ್ಲಿ ಯೇಸುಕ್ರಿಸ್ತನಿಗಾದ ಮೂರನೆಯ ಶೋಧನೆ ಯಾವುದು?**

---

ಸೈತಾನನು ತನ್ನನ್ನು ಈ ಲೋಕದ ನ್ಯಾಯಸಮ್ಮತವಾದ ಅಧಿಕಾರಿಯೆಂದು ಹೆಮ್ಮೆಯಿಂದಲೂ ಅಹಂಕಾರದಿಂದಲೂ ಹೇಳಿಕೊಳ್ಳುತ್ತಾನೆ. ಈ ಲೋಕದ ಎಲ್ಲಾ ಸಂಪತ್ತಿಗೂ, ಘನ ಪ್ರಭಾವಕ್ಕೂ ತಾನೇ ಯಜಮಾನನೆಂದು ಇದರ ಸೃಷ್ಟಿಕರ್ತನೆಂಬಂತೆ ಲೋಕದ ನಿವಾಸಿಗಳೆಲ್ಲರ ಗೌರವ ಆದರಣೆಗಳು ತನಗೆ ಸಲ್ಲಬೇಕೆಂದು ಹಕ್ಕೊತ್ತಾಯ ಮಾಡುತ್ತಾನೆ. ಇದು ಸೃಷ್ಟಿಕರ್ತನಾದ ದೇವರಿಗೆ ಎಂಥಾ ಅಪಮಾನಕರವಲ್ಲವೆ.
ಸೈತಾನನು ಆರಾಧನೆಯೆಂದರೆ ಏನೆಂದು ತನಗೆ ತಿಳಿದಿದೆಂಬುದನ್ನು ತನ್ನ

ಹಕ್ಕೊತ್ತಾಯದಿಂದ ನಮಗೆ ತಿಳಿಯಪಡಿಸಿದ್ದಾನೆ. ಆರಾಧಿಸುವುದೆಂದರೆ ಈ ಜಗತ್ತಿನ ನಿಜವಾದ ಯಜಮಾನನಿಗೆ ಗೌರವ ಮತ್ತು ಮರ್ಯಾದೆಯನ್ನು ಸಲ್ಲಿಸುವುದಾಗಿದೆ.

**ದಾನಿಯೇಲ 3ನೇ ಅಧ್ಯಾಯ 8–18 ವಚನಗಳಲ್ಲಿರುವ ಮೂವರು ಇಬ್ರಿಯ ಯುವಕರ ಅನುಭವವನ್ನು ಪ್ರಕಟನೆ 13:4 ಮತ್ತು 14:9–11ರಲ್ಲಿ ಕೊಟ್ಟಿರುವ ಅಂತ್ಯಕಾಲದ ಅಧಿಕಾರಕ್ಕೆ ಹೋಲಿಸಿರಿ. ಅಂತ್ಯಕಾಲದಲ್ಲಿ ಯಾವುದು ಅಪಾಯಕ್ಕೀಡಾಗಿದೆ? ಎರಡು ಸನ್ನಿವೇಶದಲ್ಲಿ ಇರುವ ಮುಖ್ಯವಾದ ವಿಷಯವೇನು?**

——————————————————————————————————————

——————————————————————————————————————

——————————————————————————————————————

ಕಾಯನ ಹೇಬೆಲರಿಂದ ಹಿಡಿದು ಬ್ಯಾಬಿಲೋನಿನಲ್ಲಿದ್ದ ಮೂವರು ಯುವಕರವರೆಗೆ, ಮೃಗದ ಗುರುತನ್ನು ಕುರಿತು ಅಂತ್ಯಕಾಲದ ಘಟನೆಯನ್ನು ಗಮನಿಸಿದರೆ ಸೈತಾನನು ಮಿಥ್ಯಾರಾಧನೆ ಕ್ರಮವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುತ್ತಾನೆಂಬುದು ಗೊತ್ತಾಗುತ್ತದೆ. ಈ ಮಿಥ್ಯಾರಾಧನೆಯು ಜನರನ್ನು ದೇವರಿಂದ ದೂರುಮಾಡುತ್ತದೆ. ಸೈತಾನನು ಯುಕ್ತಿಯಿಂದ ಜನರು ತನ್ನನ್ನು ಪೂಜಿಸುವಂತೆ ಮಾಡಿ ಬಿಡುತ್ತಾನೆ. ಪರಲೋಕದಿಂದ ದೊಬ್ಬಲ್ಪಟ್ಟ ಮೊದಲಿನಿಂದಲೂ ಆತನು ಹೀಗೆಯೇ ವರ್ತಿಸಿದ್ದಾನೆ. ತನ್ನನ್ನು ದೇವರಿಗೆ ಸರಿ ಸಮಾನ ಮಾಡಿಕೊಳ್ಳಲು ಪ್ರಯತ್ನಿಸಿದ್ದಾನೆ. ಯೆಶಾಯ 14:14.

ಇಬ್ರಿಯ ಯುವಕರಾದ ಶದ್ರಕ್, ಮೇಶಕ್, ಅಬೇದ್‌ನೆಗೋ ಈ ಮೂವರನ್ನು ಬ್ಯಾಬಿಲೋನಿನ ರಾಜ ತನ್ನ ಪ್ರತಿಮೆಗೆ ಅಡ್ಡಬೀಳುವಂತೆ ಒತ್ತಾಯ ಪಡಿಸಿದನು. ಅವರು ಅಡ್ಡಬೀಳದಿದುದ್ದಕ್ಕೆ ಅವರಿಗೆ ಮರಣದಂಡ ವಿಧಿಸಲಾಯ್ತು ಹಾಗೆಯೇ ಅಂತ್ಯಕಾಲದಲ್ಲಿ ದೇವರಿಗೆ ನಂಬಿಗಸ್ತರಾದವರಿಗೆ ಇದೇ ತರನಾದ ಬೆದ–ರಿಕೆ ಬರುವುದು ಕೇವಲ ಆಕಸ್ಮಿಕವಲ್ಲ.

ಸತ್ಯದೇವರನ್ನು ಪೂಜಿಸುವುದಕ್ಕೆ ನಾವು ಕರೆಯಲ್ಪಟ್ಟಿದ್ದೇವೆ. ಆದರೆ ಅದರ ಬದಲು ವಿಗ್ರಹವನ್ನು ಪೂಜಿಸುವುದು ಯಾಕೆ?

ಇಬ್ರಿಯ ಯುವಕರ ಅನುಭವದಿಂದ ಕಲಿಯುವ ಪಾಠಗಳು ಬಹಳ ಮುಖ್ಯವಾಗಿವೆ.

ದೇವರಿಂದ ಕರೆಯಲ್ಪಟ್ಟವರು ತಪ್ಪಿನಡೆಯದೆ ನಂಬಿಗಸ್ತರಾಗುವವರಿಗೆ ಸಂಕಟ ಕಾಲವು ಮುಂದಿದೆ.

ತಾವು ಆರಾಧಿಸುವ ವ್ಯಕ್ತಿಯು ಸತ್ಯದೇವರು ಮಾತ್ರ ಎಂಬುದನ್ನು ಆತನ ಮಕ್ಕಳು (ದೇವರ ಮಕ್ಕಳು) ಸ್ಪಷ್ಟವಾಗಿ ತೋರಿಸಿಕೊಳ್ಳಬೇಕು. ಯಾವ ವಿಚಾರವೂ

ಪ್ರಾಣಕ್ಕೆ ಅಪಾಯ ತರುವ ಸಂದರ್ಭವೂ ಸಹ ಸುಳ್ಳು ಆರಾಧನೆಯನ್ನು ಪ್ರೇರಿಸುವ ಯಾವುದಕ್ಕೂ ಸಣ್ಣ ರಿಯಾಯ್ತಿಕೊಟ್ಟುಕೊಳ್ಳಬಾರದು. ನಿಷ್ಠೆಯುಳ್ಳ ಹೃದಯಕ್ಕೆ ಪಾಪ ತುಂಬಿದ, ಮಿತಿಯುಳ್ಳ ಮನುಷ್ಯನ ಕಟ್ಟಳೆಗಳು ನಿತ್ಯದೇವರ ವಾಕ್ಯಗಳ ಮುಂದೆ ಕೇವಲ ನಗಣ್ಯವಾದವುಗಳು, ಮುಳುಗಿ ಹೋಗುವವು. ಸತ್ಯಕ್ಕೆ ವಿಧೇಯರಾಗಬೇಕು. ಅದರಿಂದ ಬರುವ ಫಲಿತಾಂಶವು ಸೆರೆಮನೆ, ಬಹಿಷ್ಕಾರ, ಮರಣ ಯಾವುದಾದರೂ ಸರಿ.
ಎಲೆನ್ ಜಿ. ವೈಟ್, ಪ್ರೊಫೆಟ್ಸ್ ಅಂಡ್ ಕಿಂಗ್ಸ್, ಪುಟ 512, 513.

**ಮಿಥ್ಯಾರಾಧನೆಯು ನಾವು ನೆನಸುವುದಕ್ಕಿಂತಲೂ ಹೆಚ್ಚು ಸೂಕ್ಷ್ಮವಾಗಿದೆ ಹೇಗೆ? ನಾವು ಯಾವ ಯಾವ ವಸ್ತುಗಳನ್ನು ಪೂಜಿಸುವಂತೆ ಈಗಲೂ ಸಹ ಶೋಧನೆಗಳಿಗೆ ಒಳಗಾಗುತ್ತಿದ್ದೇವೆ?**

**ಮಂಗಳವಾರ** **ಡಿಸೆಂಬರ್ 11**

**ಮೊದಲ ದೇವದೂತನ ಸಂದೇಶ**

ಅಡ್ವೆಂಟಿಸ್ಟರು ಪ್ರಕಟನೆ 14:8–12 ಮತ್ತು 14:14–20 ರಲ್ಲಿ ಇರುವ ಮೂರು ದೂತರ ಸಂದೇಶಗಳು ಕ್ರಿಸ್ತನ ಎರಡನೇ ಬರೋಣಕ್ಕೆ ಮೊದಲೆ ತಮ್ಮ ಸಭೆಯು ನಡೆಸುವ ಧರ್ಮಪ್ರಸಾರ ಕಾರ್ಯವನ್ನೂ ಅದರ ಕೇಂದ್ರಭಾಗವನ್ನು ವರ್ಣಿಸುತ್ತದೆಂದು ಹೇಳುತ್ತಾರೆ (ಕಾಣುತ್ತಾರೆ). ಇವು ಭೂಲೋಕದ ಎಲ್ಲಾ ನಿವಾಸಿಗಳಿಗೆ ಮಹಾಶಬ್ದದಿಂದ ಸಾರಿ ಹೇಳಬೇಕಾದ ಮುಖ್ಯಸಂದೇಶಗಳು.

**ಪ್ರಕಟನೆ 14:6–7ನ್ನು ಓದಿರಿ, ಮೊದಲನೆಯ ದೇವದೂತನ ಸಂದೇಶವೇನು? ಇದು ದೇವರ ಬಗ್ಗೆ ಹೇಳುವುದೇನು? ಈ ಸಂದೇಶದಲ್ಲಿ ದೇವರನ್ನು ಆರಾಧಿಸುವ ಉಲ್ಲೇಖವಿದೆ ಏಕೆ?**

---------------------------------------------

---------------------------------------------

ಮೂರು ದೂತರುಗಳ ಸಂದೇಶದಲ್ಲಿ ಮೊದಲನೆಯದು ಇಡೀ ಲೋಕಕ್ಕೆ ಬರುವ ಸಂದೇಶವನ್ನು ಸಾರಿ ಹೇಳುತ್ತದೆ. ಇದು ಮತ್ತಾಯ 24:14 ರಲ್ಲಿ ಕ್ರಿಸ್ತನು ಜನರಿಗೆ ಮುಂತಿಳಿಸಿರುವ ಸಂದೇಶದ ನೆರವೇರಿಕೆಯಾಗಿದೆ. ಈ ಮೂವರು ದೂತರ ಮತ್ತು ಅವರು ನಡೆಸುವ ಧರ್ಮಪ್ರಚಾರ ಕಾರ್ಯದ ವರ್ಣನೆಯಲ್ಲಿ ತುರ್ತಿನ ಮತ್ತು

ಅವಸರದ ಅರಿವು ಇದೆ.

ಮೊದಲ ಸಂದೇಶವು ಜನರನ್ನು ದೇವರ ಕಡೆಗೆ ತಮ್ಮ ಗಮನ ಹರಿಸುವಂತೆ ಒತ್ತಾಯ ಪಡಿಸುತ್ತದೆ. ಆತನು ನ್ಯಾಯತೀರ್ಪು ಮಾಡುವ ಗಳಿಗೆಯು ಬಂದಿದೆ (ಪ್ರಕ 14:7). ಕ್ರಿಸ್ತನ ಎರಡನೆಯ ಬರೋಣವು ನ್ಯಾಯವಿಚಾರಣೆಯ ಕೆಲಸವನ್ನು ತ್ವರೆಪಡಿಸುತ್ತದೆ. ಈ ದೇವದೂತನು ದೆವರನ್ನು ಗಂಭೀರವಾಗಿ ತೆಗೆದುಕೊಳ್ಳದವರಿಗೆ "ನೀವೆಲ್ಲರೂ ಭಯಪಟ್ಟು- ಆತನನ್ನು ಘನಪಡಿಸಿರಿ" ಎಂಬುದಾಗಿ ಹೇಳುತ್ತಾನೆ (ಪ್ರಕ 14:7). ಇದು ನಿಜವಾಗಿಯೂ ಅವರ ಮನಸ್ಸಿನಲ್ಲಿ ಈ ಭಯವನ್ನು ಹುಟ್ಟಿಸುವ ಮತ್ತು ಕಾರ್ಯೋನ್ಮುಖರಾಗಿಸುವ ಸಂದೇಶವೂ ಕರೆಯೂ ಆಗಿದೆ. ಆದರೆ ಕ್ರಿಸ್ತನನ್ನು ಹಿಂಬಾಲಿಸುವವರಿಗೆ ಭಕ್ತಿಯನ್ನು ಗೌರವವನ್ನೂ ಆಹ್ವಾನಿಸುವ ಕರೆಯಾಗಿದೆ. ಅವರು ದೇವರ ಕಡೆಗೆ ನೋಡುತ್ತಾರೆ. ಆತನ ವಾಗ್ದಾನಗಳು ನೆರವೇರುವುದನ್ನು ಕಾಣುತ್ತಾರೆ. ಆವಾಗ ಅವರಿಗೆ ದೇವರಲ್ಲಿ ಒಂದು ಕೃತಜ್ಞಾ- ಪೂರ್ವಕವಾದ ಭಕ್ತಿಯ ಅರಿವು ಹಿಡಿದುಕೊಳ್ಳುತ್ತದೆ.

ಭೂಲೋಕ ಪರಲೋಕಗಳನ್ನೂ ಸಮುದ್ರವನ್ನೂ ನೀರಿನ ಬಗ್ಗೆಗಳನ್ನೂ ಉಂಟು ಮಾಡಿದಾತನಿಗೆ ನಮಸ್ಕಾರ ಮಾಡಿರಿ ಎಂದು ಮಹಾಶಬ್ದದಿಂದ ಹೇಳಿದನು (ಪ್ರಕ 14:7). ಇಲ್ಲಿರುವ ಭಾಷೆಯು ಸಬ್ಬತ್ತಿನ ಆಜ್ಞೆಗೆ ತಪ್ಪಿಲ್ಲದ ಉಲ್ಲೇಖವಾಗಿದೆ. ಇದರಲ್ಲಿ ಸೃಷ್ಟಿಯ ಉಲ್ಲೇಖವಿದೆ (ವಿಮೋ 20:8-11). ತನ್ನ ಸೃಷ್ಟಿಸುವ ಸಾಮರ್ಥ್ಯಕ್ಕೆ ಜ್ಞಾಪಕಾರ್ಥವಾಗಿ ಸೃಷ್ಟಿಕರ್ತನಾದ ದೇವರು ಸಬ್ಬತ್ತನ್ನು ಸ್ಥಾಪಿಸಿದ್ದಾನೆ. ಆದುದರಿಂದ ಆತನು ಭಕ್ತಿ ಭಯದಿಂದ ಆರಾಧಿಸಲ್ಪಡುವವನಾಗಿದ್ದಾನೆ.

ಮಹಾಸಂಘರ್ಷದಲ್ಲಿ ಅಂತ್ಯಕಾಲದಲ್ಲಿ ಮಾನವ ಕುಲವು ದೇವರಿಗೆ ತೋರಿಸುವ ನಿಷ್ಠೆಗೆ ಸಬ್ಬತ್ತಿನಲ್ಲಿ ಆರಾಧಿಸುವುದು ಮುಖ್ಯಗುರುತಾಗಿರುತ್ತದೆ. ಲೋಕದಾದ್ಯಂತ ಮಾಡುವ ಈ ಪ್ರಕಟನೆಯು ಸೃಷ್ಟಿಕರ್ತನ ಆರಾಧನೆಗೆ ಒಂದು ಕರೆಯಾಗಿದೆ.

ಅಂತಿಮ ಬಿಕ್ಕಟ್ಟಿನಲ್ಲಿ ಮುಖ್ಯವಾದ ಚರ್ಚೆ (ಕೇಂದ್ರಿತ ವಿವಾವದ) ಆರಾಧನೆ. ನಮಗಿರುವ ಪರೀಕ್ಷೆಯು ಆರಾಧನೆಯನ್ನು ನಿರಾಕರಿಸುವುದಲ್ಲ. ಆದರೆ ಯಾರನ್ನು ಆರಾಧಿಸುತ್ತೇವೆ ಎಂಬುದೇ. ಇದನ್ನು ಪ್ರಕಟನೆಗಳು ಸ್ಪಷ್ಟಪಡಿಸುತ್ತದೆ.

ಲೋಕದಲ್ಲಿ ಅಂತ್ಯಕಾಲದಲ್ಲಿ ಕೇವಲ ಎರಡು ಗುಂಪಿನವರಿರುತ್ತಾರೆ. ಒಂದು ಗುಂಪು ಭಯಪಟ್ಟು ಸತ್ಯದೇವರನ್ನು ಆರಾಧಿಸುತ್ತದೆ. ಮತ್ತೊಂದು ಗುಂಪು ಸತ್ಯವನ್ನು ದ್ವೇಷಿಸಿ ಪಿಶಾಚನನ್ನು ಅದರ ಮೃಗವನ್ನು ಆರಾಧಿಸುತ್ತದೆ (ಪ್ರಕ 11:1, 18; ಪ್ರಕ 14:7; ಪ್ರಕ 13:4-8 ಮತ್ತು ಪ್ರಕ 14:9-11).

ಅಂತಿಮ ಕಾಲದ ಬಿಕ್ಕಟ್ಟಿನಲ್ಲಿ ಆರಾಧನೆಯು ಪ್ರಮುಖ ವಿವಾದವಾಗಿದ್ದರೆ ಆರಾಧನೆಗೆ ಯೋಗ್ಯವಾದ ಏಕಮಾತ್ರ ದೇವರು ತನ್ನನ್ನು ಸೃಷ್ಟಿಕರ್ತನೆಂದು ಭೂಲೋಕದ

ನಿವಾಸಿಗಳಿಗೆ ಗಂಭೀರವಾಗಿ ತೆಗೆದುಕೊಂಡು ಆರಾಧಿಸಬೇಕೆಂಬ ಅಂತ್ಯಕಾಲದ ಸುವಾರ್ತೆಯನ್ನು ಕಳುಹಿಸುತ್ತಾನೆ. ಇದಕ್ಕೆ ಆಶ್ಚರ್ಯಪಡಬೇಕಾಗಿಲ್ಲ. 2002 ರಲ್ಲಿ ಆಂಡ್ರೇಯ ಯೂನಿವರ್ಸಿಟಿ ಮುದ್ರಣಾಲಯದ ವರ್ಷದ ಪುಸ್ತಕದ ವ್ಯಾಖ್ಯಾನ "ಯೇಸುಕ್ರಿಸ್ತನ ಪ್ರಕಟಣೆಗಳು".

**ಬುಧವಾರ**

**ಡಿಸೆಂಬರ್** 12

**ಸತ್ಯವೇದ ಅಧ್ಯಯನ ಮತ್ತು ಅನ್ಯೋನ್ಯತೆ**

**ಅ.ಕೃ. 2:42ನ್ನು ಓದಿರಿ. ಆದಿ ಕ್ರೈಸ್ತರ ಆರಾಧನೆಯ ಕೆಲವು ಗುಣಲಕ್ಷಣಗಳಾವುವು?**

____________________________________________

ಇವರು ಅಪೋಸ್ತಲರ ಬೋಧನೆ ಕೇಳುವುದರಲ್ಲಿಯೂ ಸಹೋದರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವುದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು (ಅ.ಕೃ. 2:42). ಅಪೋಸ್ತಲರಿಂದ ನಮಗೆ ಕೊಡಲ್ಪಟ್ಟ ದೇವರ ವಾಕ್ಯಗಳಲ್ಲಿ ಆರಾಧನೆಯು ವಿಶಿಷ್ಠಗೊಂಡಿದೆ. ಆದಿಕ್ರೈಸ್ತರು ಮೆಸ್ಸೀಯನಾದ ಯೇಸುವಿನ ಬಗ್ಗೆ ಪರಿಶುದ್ಧ ಶಾಸ್ತ್ರದಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳಲು ಅದರ ಅಧ್ಯಯನದಲ್ಲಿ ಯಥಾರ್ಥರಾಗಿದ್ದರು.

ದೇವರು ಅವರಿಗೆ ಕೊಟ್ಟ ಆಶೀರ್ವಾದಗಳಲ್ಲಿ ಒಬ್ಬರಿಗೊಬ್ಬರು ಹಂಚಿಕೊಡುವುದಕ್ಕೂ, ತಮ್ಮ ಆತ್ಮೀಕ ಜೀವಿತದಲ್ಲಿ ದೇವರೊಟ್ಟಿಗೆ ನಡೆಯುವ ಉತ್ತೇಜನಕ್ಕೂ ಪರಸ್ಪರ ಉತ್ತೇಜಿಸುವುದಕ್ಕೂ ಅನುಕೂಲವಾಗುವಂತೆ ನಿರಂತರವಾಗಿ ಅನ್ಯೋನ್ಯತೆಯಲ್ಲಿದ್ದರು. ಲೋಕಕ್ಕೆ ಅವರು ಕೊಡುವ ಸಂದೇಶದ ಅಸ್ತಿವಾರವಾಗುವಂತಹ ಅಮೂಲ್ಯವಾದ ಸತ್ಯಗಳನ್ನು ದೇವರ ವಾಕ್ಯದಿಂದ ಹೆಕ್ಕಿ ತೆಗೆಯುತ್ತಿದ್ದರು. ಇತರೆ ವಿಶ್ವಾಸಿಗಳ ಅನ್ಯೋನ್ಯತೆಯಲ್ಲಿ ದೇವರ

**ವಾಕ್ಯಗಳನ್ನು ಅಧ್ಯಯನ ಮಾಡುವ ಬಗ್ಗೆ ಈ ಕೆಳಗಿನ ವಚನಗಳು ಏನನ್ನು ಹೇಳುತ್ತವೆ**

2 **ಅರಸು** 22:8–13, ________________________________

**ಅ.ಕೃ.** 17:10, 11, __________________________________

2 **ತಿಮೋ** 3:14–17.________________________________

ಎಲ್ಲೆಲ್ಲಿ ಸುವಾರ್ತಾ ಸತ್ಯತೆಗಳು ಸಾರಲ್ಪಟ್ಟಿವೋ ಅಲ್ಲೆಲ್ಲಾ ಯಾರು

ಸರಿಯಾದದ್ದನ್ನು ಮಾಡಲು ಇಚ್ಛಿಸಿದರೋ ಅವರು ಪರಿಶುದ್ಧ ವಾಕ್ಯಗಳನ್ನು ಚೆನ್ನಾಗಿ ಪರಿಶೋಧಿಸುವುದಕ್ಕೆ ನಡೆಸಲ್ಪಟ್ಟರು. ಭೂಮಿಯು ಚರಿತ್ರೆಯ ಮುಕ್ತಾಯದ ಸನ್ನಿವೇಶದಲ್ಲಿ ಯಾರ್ಯಾರಿಗೆ ಸುವಾರ್ತೆಯು ಸಾರಲ್ಪಟ್ಟಿದೆಯೋ ಅವರೆಲ್ಲ ಬೆರೆಯಾದವರು ನಮಗೆ ತಿಳಿಸಿರುವುದು ವಾಕ್ಯಗಳಲ್ಲಿ ಇದೆಯೋ? ಇಲ್ಲವೋ? ಎಂದು ಪ್ರತಿದಿನವು ಬರಹಗಳನ್ನು ಶೋಧಿಸುತ್ತಿದ್ದರೋ, ಹಾಗೆಯೇ ಇಂದು ದೇವರ ಧರ್ಮಶಾಸ್ತ್ರದ ನೇಮಗಳಿಗೆ ನಿಷ್ಠರಾಗಿರುವವರು ಹೆಚ್ಚಿನ ಸಂಖ್ಯೆಯಲ್ಲಿ ಇರಬೇಕಾಗಿತ್ತು. ಆದರೆ ಬೇರೋಯದವರಿಗೆ ಹೋಲಿಸಿದರೆ ಅಂಥವರು ಕೆಲವರು ಮಾತ್ರ.

ಇದು ನಾವೆಲ್ಲರೂ ಒಟ್ಟುಗೂಡಿದ ಜನರಾಗಿದ್ದೇವೆ. ಯಾಕೆಂದರೆ ನಾವೆಲ್ಲರು ಸಾರುವ ಸತ್ಯಗಳು ದೇವರ ವಾಕ್ಯದಲ್ಲಿ ಕಂಡುಬರುವ ಸತ್ಯಗಳಾಗಿವೆ. ಇದು ಅಂದಿನ ದಿನಗಳಲ್ಲಿದ್ದ ದೇವರ ಸಭೆಯಲ್ಲಿ ಇದು ನಿಜವಾಗಿತ್ತು. ಈವಾಗ ಇಂದಿನ ದಿನದ ಸಭೆಗಳಲ್ಲಿ ಇದು ನಿಜವಾಗಿದೆ. ದೇವರ ಆರಾಧನೆಗೂ ಪ್ರಪಂಚಕ್ಕೆ ಮೂರು ದೂತರ ಸಂದೇಶವನ್ನು ಸಾರುವುದಕ್ಕೆ ಕರೆಯಲ್ಪಟ್ಟವರ ಐಕ್ಯತೆಗೂ ದೇವರ ಅಧ್ಯಯನವೇ ಕೇಂದ್ರಭಾಗವಾಗಿದೆ.

ನಾವು ಅನ್ಯೋನ್ಯತೆ ಮತ್ತು ಆರಾಧನೆಯ ಸಲುವಾಗಿ ಒಂದು ಕುಟುಂಬವಾಗಿ ಒಟ್ಟಾಗಿ ಸೇರಿ ಬಂದಾಗ ಧರ್ಮಪ್ರಚಾರದ ಸಿದ್ಧತೆಗೆ ಮತ್ತು ಯೇಸುವಿನ ಎರಡನೆಯ ಬರೋಣಕ್ಕೆ ನಮ್ಮ ಜೀವಿತಗಳಿಗೆ ಮಾರ್ಗದರ್ಶನ ಮಾಡಲು ಸತ್ಯವೇದವು ದೇವರ ಮಾತನ್ನು ನಮಗೆ ನುಡಿಯುತ್ತದೆ.

**ಮರಣದ ಸಂದರ್ಭದಲ್ಲೂ ಇಬ್ರಿಯ ಹುಡುಗರು ದೃಢವಾಗಿ ನಿಂತ ಹಾಗೆ ನೀವು ಸಹಾ ನಿಮಗೆ ಸಾಧ್ಯವಾಗುವಲ್ಲೆಲ್ಲ ನಿಲ್ಲುವುದಕ್ಕೆ ವಾಕ್ಯದಲ್ಲಿ ಸಾಕಷ್ಟು ನೆಲೆಗೊಂಡಿದ್ದೀರಾ?**

**ಗುರುವಾರ** **ಡಿಸೆಂಬರ್ 13**

**ಸಹಭೋಜನ ಮತ್ತು ಪ್ರಾರ್ಥನೆ**

ಕಷ್ಟಗಳ ಎಲ್ಲಾ ಸಂದರ್ಭದಲ್ಲಿ ಆದಿಸಭೆಯು ಯೇಸುಕ್ರಿಸ್ತನ ಮೇಲಿನ ನಂಬಿಕೆಯಲ್ಲೂ ಲೋಕಕ್ಕೆ ಸಾರಬೇಕೆಂದು ಅವರ ಜವಾಬ್ದಾರಿಗೆ ಕೊಟ್ಟಿದ್ದ ಸತ್ಯದಲ್ಲೂ ಒಂದಾಗಿದ್ದರು. ಇದು ಪೇತ್ರನು ವರ್ತಮಾನ ಸತ್ಯವೆಂದು (2 ಪೇತ್ರ 1:12) ರಲ್ಲಿ ಹೇಳಿದ್ದನೋ, ಆ ಸತ್ಯದಲ್ಲಿ ಒಂದಾಗಿದ್ದರು. ಅವರು ತಮ್ಮ ಐಕ್ಯತೆಯನ್ನು ಅನೇಕ ಬಗೆಯಲ್ಲಿ ವ್ಯಕ್ತಪಡಿಸಿದ್ದರು.

"ಇವರು ಅಪೋಸ್ತಲರ ಬೋಧನೆಯನ್ನು ಕೇಳುವುದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ನಿರತರಾಗಿದ್ದರು". ಅಮೋ 2:42. ಇಲ್ಲಿ ರೊಟ್ಟಿ ಮುರಿಯುವ ಉಲ್ಲೇಖವು ಪ್ರಾಯಶಃ ಸಹಭೋಜನಕ್ಕೆ ಅಂದರೆ ವಿಶ್ವಾಸಿಗಳು ಹಂಚಿಕೊಂಡು ತಿನ್ನುವ ಪ್ರತಿನಿತ್ಯದ ಊಟಕ್ಕೂ ಸಂಬಂಧಿಸುತ್ತದೆ. ಕೆಲವು ವೇಳೆ ಸಹಭೋಜನ ಮಾಡುವಾಗ ಯಾರೊಬ್ಬರು ರೊಟ್ಟಿ ಮತ್ತು ದ್ರಾಕ್ಷಾರಸಕ್ಕಾಗಿ ವಿಶೇಷವಾದ ಆಶೀರ್ವಾದವನ್ನು ಸಲ್ಲಿಸುತ್ತಾರೆ. ಇದು ಯೇಸುಕ್ರಿಸ್ತನ ಮರಣ ಪುನರುತ್ಥಾನ ಮತ್ತು ನಾವು ನಿರೀಕ್ಷಿಸುವ ಆತನ ಶೀಘ್ರ ಬರೋಣದ ಸ್ಮರಣೆಯಾಗಿದೆ. ಈ ಸಹಭೋಜನಗಳಲ್ಲಿ ಆದಿಕ್ರೈಸ್ತರು ಯೇಸುಕ್ರಿಸ್ತನ ಜೀವನ, ಆತನ ಸೇವೆ ಜ್ಞಾಪಿಸಿಕೊಳ್ಳುವುದಕ್ಕೆ ಸಮಯವನ್ನು ಮೀಸಲಾಗಿ ಇಡುತ್ತಿದ್ದರು. ಅವರು ಆಹಾರ ಹಂಚಿ ತಿನ್ನುತ್ತಿದ್ದ ಸಮಯವೇ ಆರಾಧನೆಯ ಸಮಯವಾಗಿರುತ್ತಿತ್ತು.

"ಅವರು ದಿನಾಲು ಏಕಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತಾ ಮನೆ ಮನೆಗಳಲ್ಲಿ ರೊಟ್ಟಿ ಮುರಿದು ಉಲ್ಲಾಸದಿಂದಲೂ ಸಕಲ ಹೃದಯದಿಂದಲೂ ಊಟ ಮಾಡುತ್ತಾ ಇದ್ದರು. ದೇವರನ್ನು ಕೊಂಡಾಡುವವರಾಗಿಯೂ ಇದ್ದರು. ಕರ್ತನು ರಕ್ಷಣೆಯ ಮಾರ್ಗದಲ್ಲಿ ಇರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು" ಅ.ಕೃ. 2:46, 47.

ಯೇಸುಕ್ರಿಸ್ತನಲ್ಲಿ ಅವರಿಗಿದ್ದ ಐಕ್ಯತೆಯ ಅರಿವನ್ನು ಬಲಪಡಿಸಲು ಈ ಅನ್ಯೋನ್ಯತೆಯ ಸಮಯವು ಬಹಳವಾಗಿ ಸಹಾಯ ಮಾಡುತ್ತಿತ್ತು ಎಂಬುದಕ್ಕೆ ಸಂದೇಹವೇ ಇಲ್ಲ.

**ಅಪೋಸ್ತಲರ ಕೃತ್ಯಗಳು ಪುಸ್ತಕದಲ್ಲಿ ಆದಿಕ್ರೈಸ್ತರು ಒಟ್ಟಾಗಿ ಪ್ರಾರ್ಥಿಸುತ್ತಿದ್ದ ಯಾವ ಉದಾಹರಣೆಗಳು ನಮಗೆ ಇವೆ? ಯಾತಕ್ಕೋಸ್ಕರ ಅವರು ಪ್ರಾರ್ಥಿಸುತ್ತಿದ್ದರು?**

**ಅ.ಕೃ. 1:14,** ________________________________________

**ಅ.ಕೃ. 4:23–31,** ____________________________________

**ಅ.ಕೃ. 12:12.**_______________________________________

ಆದಿಕ್ರೈಸ್ತರು ದೇವರೊಟ್ಟಿಗೆ ನೇರ ಸಂಪರ್ಕದ ಅವಕಾಶವನ್ನು ಬಯಸುತ್ತಿದ್ದರು ಮತ್ತು ಅವರು ಆರಾಧನೆಗೆ ಒಟ್ಟಾಗಿ ಸೇರಿದಾಗ ತಮ್ಮ ವಿಜ್ಞಾಪನೆಗಳನ್ನು ಅರ್ಪಿಸಲು ಎಂದಿಗೂ ತಪ್ಪುತ್ತಿರಲಿಲ್ಲ. ಕ್ರೈಸ್ತರು ಒಟ್ಟಾಗಿ ಸೇರಿ ಬಂದಾಗ ಪ್ರಾರ್ಥನೆಯ ಪ್ರಾಮುಖ್ಯತೆ ಎಷ್ಟೆಂದು ಪೌಲನು ತಿಮೋಥೆಗೆ ಬರೆದ ಪತ್ರಿಕೆಯಲ್ಲಿ ತಿಳಿಸುತ್ತಾನೆ (1 ತಿಮೊ 2:1).

"ನೀವು ಪವಿತ್ರಾತ್ಮ ಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲ ವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ಇದರಲ್ಲಿ

ಪೂರ್ಣ ಸ್ಥಿರಚಿತ್ತರಾಗಿದ್ದು ದೇವಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆ ಮಾಡುತ್ತಾ ಎಚ್ಚರವಾಗಿರ್ರಿ. ನನಗೋಸ್ಕರ ಸಹ ಪ್ರಾರ್ಥನೆ ಮಾಡಿರಿ. ನಾನು ಬಾಯಿ ತೆರೆಯುವಾಗ ಪೂರ್ವಕಾಲದಲ್ಲಿ ಗುಪ್ತವಾಗಿದ್ದ ಸುವಾರ್ತಾ ಸತ್ಯಾರ್ಥವನ್ನು ಭಯವಿಲ್ಲದೆ ತಿಳಿಸುವುದಕ್ಕೆ ಬೇಕಾದ ಮಾತನ್ನು ದೇವರು ನನಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಿರಿ" ಎಫೆ 6:18, 19.

**ಸಾಮಾನ್ಯ ಉದ್ದೇಶದಿಂದ ಮತ್ತೊಬ್ಬರಿಗಾಗಿ ಮಾಡುವ ಪ್ರಾರ್ಥನೆಯ ಮೂಲಕ ಏಕ್ಯತೆಯ ಆಳವಾದ ಅನುಭವ ಹೊಂದಲು ಇರುವ ಮಾರ್ಗಗಳಾವುವು?**

**ಶುಕ್ರವಾರ** **ಡಿಸೆಂಬರ್ 14**

**ಹೆಚ್ಚಿನ ಚಿಂತನೆ : ಪ್ರಾರ್ಥನೆಯ ಬರಹಗಳನ್ನು ಓದಿರಿ ಪುಟ 1044–1046, ಮತ್ತು ಆರಾಧನೆ ಬರಹಗಳು ಪುಟ 1290–1291, ಎಲೆನ್ ಜಿ ವೈಟ್ ರವರ ವಿಶ್ವಕೋಶ.**

"ಸೃಷ್ಟಿಯ ಜ್ಞಾಪಕಾರ್ಥವಾದ ಸಬ್ಬತ್ತಿನ ಪ್ರಾಮುಖ್ಯತೆಯು ದೇವರಿಗೆ ಏಕೆ ಸಲ್ಲಬೇಕು ಎಂಬುದರ ನಿಜವಾದ ಕಾರಣವನ್ನು ಯಾವಾಗಲೂ ಮುಂದಿಡುತ್ತದೆ. ಯಾಕೆಂದರೆ ಆತನು ಸೃಷ್ಟಿಕರ್ತನು, ನಾವೆಲ್ಲರೂ ಆತನ ಸೃಷ್ಟಿಗಳು. ಆದುದ–ರಿಂದ ದೈವೀಕ ಆರಾಧನೆಯ ಅಸ್ತಿವಾರದಲ್ಲೇ ಸಬ್ಬತ್ತು ಇರುತ್ತದೆ. ಯಾಕೆಂದರೆ ಇದು ಮನಸ್ಸಿಗೆ ಒಪ್ಪುವ ರೀತಿಯಲ್ಲಿ ಈ ಮಹಾಸತ್ಯವನ್ನು ಬೋಧಿಸುತ್ತದೆ. ಬೇರೆ ಇನ್ನಾವ ಸಂಸ್ಥೆಯೂ ಇದನ್ನು ಮಾಡುವುದಿಲ್ಲ. ದೈವೀಕ ಆರಾಧನೆಯ ನಿಜವಾದ ನೆಲೆಯು ಕೇವಲ ಏಳನೆಯ ದಿನವಲ್ಲ. ಆದರೆ ಎಲ್ಲಾ ಆರಾಧನೆಯಲ್ಲೂ ಸೃಷ್ಟಿಗೂ–ಸೃಷ್ಟಿಕರ್ತನಿಗೂ ಇರುವ ತಾರತಮ್ಯವನ್ನು ಕಂಡುಕೊಳ್ಳುತ್ತೇವೆ. ಈ ಸತ್ಯಸಂಗತಿಯು ಎಂದೆಂದಿಗೂ ಹಳೆಯದಾಗುವುದಿಲ್ಲ ಮತ್ತು ಎಂದೆಂದಿಗೂ ಮರೆಯಲಾಗದು. ಜೆ. ಎನ್. ಅಂಡ್ರೇಯ, ಸಬ್ಬತ್ತಿನ ಚರಿತ್ರೆ, ಅಧ್ಯಾಯ 27.

'ದೇವರು ಸಬ್ಬತ್ತನ್ನು ಏದೇನಿನಲ್ಲಿ ಸ್ಥಾಪಿಸಿದನು ಎಂಬುದನ್ನು ಯಾವಾಗಲೂ ಮನುಷ್ಯರ ಮನಸ್ಸಿನಲ್ಲಿ ಈ ಸತ್ಯವನ್ನು ಇಟ್ಟುಕೊಳ್ಳುವುದಾಗಿತ್ತು. ನಾವು ಯಾತಕ್ಕೆ ಆತನನ್ನು ಆರಾಧಿಸಬೇಕು ಎಂಬುದಕ್ಕೆ ಆತನು ನಮ್ಮ ಸೃಷ್ಟಿಕರ್ತನು ಎಂಬ ಕಾರಣವನ್ನು ಎಲ್ಲಿಯವರೆಗೆ ಕೊಡುತ್ತೇವೆಯೋ ಅಲ್ಲಿಯವರೆಗೆ ಅದು ಒಂದು ಜ್ಞಾಪಕಾಥ–ರ್ವವೂ, ಗುರುತು ಆಗಿಯೂ ಸಬ್ಬತ್ತು ಮುಂದುವರಿಯುತ್ತದೆ. ಒಂದೊಮ್ಮೆ ಸಬ್ಬತ್ತನ್ನು ಸಾರ್ವತ್ರಿಕವಾಗಿ ಪಾಲಿಸಿದ್ದರೆ, ಮನುಷ್ಯರ ಆಲೋಚನೆಗಳೂ ಮತ್ತು ಆಸೆಗಳು ನಮ್ಮ ಆರಾಧನೆಗೂ ಭಕ್ತಿಗೂ ಅರ್ಹನಾದ ಸೃಷ್ಟಿಕರ್ತನೆಡೆಗೆ ನಡೆಸಲ್ಪಡುತ್ತಿತ್ತು

ಮತ್ತು ವಿಗ್ರಹಾರಾಧಕವಾಗಲಿ, ನಿರೀಶ್ವರವಾದಿಯಾಗಲಿ (ನಾಸ್ತಿಕನಾಗಲಿ), ಅಥವಾ ಅವನಂಬಿಗಸ್ತನಾಗಲಿ ಇರುತ್ತಿರಲಿಲ್ಲ. ಸಬ್ಬತ್ತನ್ನು ಕೈಗೊಳ್ಳುವುದು ಯಾವಾತನು ಭೂಮಿಯನ್ನು ಅಕಾಶವನ್ನೂ ಸಮುದ್ರವನ್ನೂ ನೀರಿನ ಬುಗ್ಗೆಗಳನ್ನೂ ಉಂಟುಮಾಡಿದನೋ ಅವನಿಗೆ ನಮ್ಮ ನಿಷ್ಠೆಯ ಗುರುತಾಗಿರುತ್ತದೆ. ಮನುಷ್ಯರನ್ನು ದೇವರ ಆರಾಧನೆಗೂ, ಆತನ ಆಜ್ಞೆಗಳಿಗೂ ವಿಶೇಷವಾಗಿ ನಾಲ್ಕನೆಯ ಆಜ್ಞೆಯನ್ನು ಆಜ್ಞಾಪಿಸುವ ಸಂದೇಶವನ್ನು ಅನುಸರಿಸುತ್ತದೆ. ಎಲೆನ್ ಜಿ ವೈಟ್, ಮಹಾಹೊರಾಟ ಪಿ.ಪಿ. 437–438.

**ಚರ್ಚಿಸಬೇಕಾದ ಪ್ರಶ್ನೆಗಳು :**

1. ಆರಾಧನೆ, ಸೃಷ್ಟಿಸುವಿಕೆ ಮತ್ತು ರಕ್ಷಣೆ ಒಂದುಕ್ಕೊಂದು ನಿಕಟವಾಗಿ ಹೆಣೆದುಕೊಂಡಿರುವ ಸತ್ಯವೇದದ ಪರಿಕಲ್ಪನೆಗಳಾಗಿರುವುದರಿಂದ, ಸಬ್ಬತ್ತಿನ ಆಚರಣೆಯು ಮಿಥ್ಯಾಚರಣೆಗೆ ದೇವರೇ ನೀಡಿರುವ ಪ್ರತಿರೋಧಕವಾಗಿದೆ, ಎಂಬುದನ್ನು ಹೇಗೆ ಆಲೋಚಿಸುವಿರಿ? ಪ್ರಕಟನೆ ಪುಸ್ತಕದಲ್ಲಿ ಕೊಟ್ಟಿರುವ ಅಂತ್ಯಕಾಲದ ಪ್ರವಾದನೆಯಲ್ಲಿ ಸಬ್ಬತ್ತು ಯಾವ ಪಾತ್ರವನ್ನು ವಹಿಸುತ್ತದೆ (ಪ್ರಕಟನೆ 14:6,7)?

2. ಸಬ್ಬತ್ತನ್ನು ಮೊದಲ ದೂತನ ಸಂದೇಶವೆಂಬುದಾಗಿ ಕರೆಯಬಹುದು ಯಾಕೆ?